> ಎಲ್ಲರೂ ಪೋಲಿಗಳೇ. ಈಗ ಈ ಪೋಲಿತನವನ್ನು ಸಾರ್ವತ್ರಿಕವಾಗಿ ಕಾಣಿಸುವ ಆಟ ನಡೆಯುತ್ತಿದೆ.
>
> -ಯೋಗರಾಜಭಟ್, ನಿರ್ದೇಶಕ



ಅಪ್ಪಿತಪ್ಪಿಯೂ ಫಿಲ್ಟರ್ ಹಾಕಿಕೊಳ್ಳುವುದಿಲ್ಲ. ಅವರು ಹೇಳಿದ ತಮ್ಮ ಅಜ್ಜಿಯ ಕಥೆಯೂ ಕುತೂಹಲಕಾರಿಯಾಗಿದೆ: 'ಅಪ್ಪನು ನನ್ನ ಅಮ್ಮನನ್ನು ಮದುವೆಯಾದದ್ದಕ್ಕೆ ನನ್ನ ಅಜ್ಜಿ ಫ್ರೀ ಆಗಿ ಸಿಕ್ಕಳು. ಅಜ್ಜಿ ಕಷ್ಟಪಟ್ಟು ಮೇಲೆ ಬಂದವಳು. ನನಗೂ ಅವಳಿಗೂ ಭಲೋ ಬಾಂಧವ್ಯ. ಅವಳು ಹಣ್ಣಾದಮೇಲೆ ಅನಾರೋಗ್ಯದಿಂದ ಬಳಲಿದಳು. ಒಮ್ಮೆ ಕುರ್ಚಿ ಮೇಲೆ ನನ್ನ ಬ್ರಾ ಇತ್ತು. ಅದನ್ನು ಎತ್ತಿಕೊಂಡು ನೈಟಿ ಮೇಲೆಯೇ ಹಾಕಿಕೊಂಡಳು. ಈಗ ಇವುಗಳು ಅಲ್ಲಾಡುವುದಿಲ್ಲ ಎಂದು ತನ್ನ ಎದೆಭಾಗವನ್ನು ಮುಟ್ಟಿಕೊಂಡಳು. ಆಗ 'ಹೋಮೋಸೆಕ್ಸ್ ಬಗ್ಗೆ ನಿನಗೆ ಗೊತ್ತೆ' ಎಂದು ಅವಳನ್ನು ಕೇಳಿದೆ. ಅದಕ್ಕೆ ಅವಳು, 'ಗೊತ್ತಿಲ್ಲದೇ ಏನು... ಮನೆಯಲ್ಲೇ ಸೆಕ್ಸ್ ಮಾಡುವುದಕ್ಕೆ ಹೋಮೋಸೆಕ್ಸ್ ಅಂತಾರೆ. ಅದು ಒಳ್ಳೆಯದೇ ಅಲ್ಲವೇ' ಎಂದು ಮರುಪ್ರಶ್ನೆ ಹಾಕಿದ್ದಳು. ಅಜ್ಜಿ ಈಗ ಸ್ವರ್ಗಸ್ಥಳಾಗಿದ್ದಾಳೆ. ಅಲ್ಲಿಂದಲೇ ಅವಳು ನೈಟಿ ಮೇಲೆ ಬ್ರಾ ಹಾಕಿಕೊಂಡು ನನ್ನ ಜತೆ ಮಾತನಾಡುತ್ತಾ ಇರುತ್ತಾಳೆ...'

ಬೆಂಗಳೂರಿನಲ್ಲೇ ವಾಸವಿರುವ ಇನ್ನೊಬ್ಬ ಸ್ಟ್ಯಾಂಡ್‌ಅಪ್ ಕಾಮಿಡಿಯನ್ ಸುಮುಖಿ ಸುರೇಶ್ ಮಾಡಿರುವ ಹಾಸ್ಯವಿದು: 'ಡಾನ್ಸ್ ಫ್ಲೋರ್‌ನಲ್ಲಿ ಕೊನೆಗೂ ಒಂದು ಒಪ್ಪಿತವಾದ ಪೀನಸ್ ಸಿಗುತ್ತೆ. ಅದುವರೆಗೆ ಇಲ್ಲದ್ದು ಆಗ ಅಮ್ಮನ ಫೋನ್ ಕಾಲ್ ಬರುತ್ತೆ. ಒಪ್ಪಿತವಲ್ಲದ ಹಲವು ಪೀನಸ್‌ಗಳು ಅದಕ್ಕೂ ಮೊದಲು ಸುಳಿದಾಡಿದ್ದಾಗ ಅಮ್ಮನ ಆ ಮಮತಾಮಯಿ ಕರೆ ಬಂದಿರೋದಿಲ್ಲ. ಅದೇ ಒಪ್ಪಿತವಾದವನು ಸಿಕ್ಕಿದ್ದೇ ಅಮ್ಮನ ಕರೆ. ತಡಬಡಾಯಿಸಿ ಬಾತ್‌ರೂಮಿಗೆ ಹೋಗಿ ಶಬಾನಾ ಆಜ್ಮಿ ರೇಂಜಲ್ಲಿ... ಹಾಂ ಮಾ... ಮಲಗಿದೀನಮ್ಮ. ಬೆಳಿಗ್ಗೆ ಎದ್ದು ದೇವಸ್ಥಾನಕ್ಕೆ ಹೋಗಬೇಕಲ್ಲಮ್ಮ ಎನ್ನುತ್ತಾ ಪುಂಗಿ ಬಿಡೋದು. ಕೆಲವು ಹುಡುಗಿಯರಂತೂ ಬಾಯ್‌ಫ್ರೆಂಡನ್ನೂ ಬಾತ್‌ರೂಮಿಗೆ ಕರೆದುಕೊಂಡು ಹೋಗಿ... ಹಲೋ ಅಂತ ಅಮ್ಮನ ಜತೆ ಮಾತಾಡಿಕೊಂಡು, ಆಗೀಗ ಫೋನ್ ಮುಚ್ಚಿ... ಅಮ್ಮನ ಕರೆ ಬರುವ ಹೊತ್ತು ಅದೇ ಆಗಬೇಕೆ?'

ಜಿಯಾ ಸೇಥಿ ಮೂವತ್ತೆಂಟು ವಯಸ್ಸಿನ ಸ್ಟ್ಯಾಂಡ್ ಅಪ್ ಕಾಮಿಡಿಯನ್. ಅವರು ಪ್ರೇಮ ಪಲ್ಲವಿಸುವ ಬಗೆಯನ್ನು 'ರಸ'ವತ್ತಾಗಿ ವರ್ಣಿಸಬಲ್ಲರು. 'ಬೆಳೆದ ಮಗನಿಗೆ ಅಪ್ಪ ಮದ್ಯದ ಲೋಟ ನೀಡಿ, ಚಿಯರ್ಸ್ ಮಾಡಿ ಹೆಮ್ಮೆಪಡುತ್ತಾರೆ. ಅದೇ ಮೊದಲ ಸಲ ಪೀರಿಯೆಡ್ ಆದ ಮಗಳಿಗೆ ತಾಯಿ ಸ್ಯಾನಿಟರಿ ಪ್ಯಾಡ್ ಕೊಟ್ಟು, ಬೆಳೆದುಬಿಟ್ಟೆ ಮಗಳೇ ಎನ್ನುತ್ತಾರೆ. ಚಡ್ಡಿಯೆಲ್ಲ ಗಲೀಜಾಗಿದೆ ಅಮ್ಮ... ನನಗೆ ನಡೆಯೋಕೂ ಆಗುತ್ತಿಲ್ಲ ಅಂತ ಸಂಕಟಪಟ್ಟು ನಾವು ಕಣ್ಣಲ್ಲಿ ನೀರು ತುಂಬಿಕೊಂಡಿರುತ್ತೇವೆ. ಆ ಪ್ಯಾಡಿನ ಜತೆಗೆ ಅಮ್ಮ ಬಿಯರ್ ಕೊಟ್ಟು ಚಿಯರ್ಸ್ ಅಂದಿದ್ದರೆ ನಾವೂ ಗಟಗಟ ಕುಡಿದು ಪೀರಿಯೆಡ್ಸ್ ಅನ್ನೂ ಎಂಜಾಯ್ ಮಾಡಬಹುದಿತ್ತು' – ಇದು ಅವರು ಹಾರಿಸಿರುವ ಚಟಾಕಿ. ಅಷ್ಟೇ ಅಲ್ಲ, 'ಹೌ ಟು ಪೀ' (ಮೂತ್ರ ವಿಸರ್ಜನೆ ಮಾಡುವುದು ಹೇಗೆ) ಎನ್ನುವ ಒಂದು ಹಾಸ್ಯದ ತುಣುಕಿನ ವಿಡಿಯೊವನ್ನೂ ಅವರು ಮಾಡಿದ್ದಾರೆ. ಪುಣ್ಯ ಅರೋರಾ ಎಂಬ ಮತ್ತೊಬ್ಬ ಲಲನೆ, 'ಪುರುಷ್ ಕಾ ಸ್ಪರ್ಮ್' ಎಂಬ ಶೀರ್ಷಿಕೆಯ ವಿಡಿಯೊ ತೇಲಿಬಿಟ್ಟಿದ್ದಾರೆ. ಅಂಗಡಿಗೆ ಹೋಗಿ ಬ್ರಾ ಕೊಂಡುಕೊಳ್ಳುವ ಉಸಾಬರಿಯನ್ನು



'ಹಾಸ್ಯ ಪಟಾಕಿ' ಸುಮುಖಿ ಸುರೇಶ್

## ವಜೈನಾ ಮೊನೊಲಾಗ್ ನಾಟಕದ ವಿಸ್ತರಣೆ

ಸಿನಿಮಾ ನಿರ್ದೇಶಕರಾಗಿ ಒಪ್ಪಿತ ತುಂಟತನ, ಪೋಲಿತನದ ಸಾಲುಗಳಿಂದ ಹಾಡುಗಳನ್ನು ಕಟ್ಟಿರುವ ಯೋಗರಾಜ್ ಭಟ್, ಹಾಸ್ಯದ ರಿಯಾಲಿಟಿ ಶೋ ತೀರ್ಪುಗಾರರೂ ಹೌದು. ಹೊಸ ಬಗೆಯ ಹಾಸ್ಯವನ್ನು ಅವರು ಹೀಗೆ ವ್ಯಾಖ್ಯಾನಿಸುತ್ತಾರೆ...

'ಎಲ್ಲರೂ ಪೋಲಿಗಳೇ. ಈಗ ಈ ಪೋಲಿತನವನ್ನು ಸಾರ್ವತ್ರಿಕವಾಗಿ ಕಾಣಿಸುವ ಆಟ ನಡೆಯುತ್ತಿದೆ. ಪಾಶ್ಚಾತ್ಯ ದೇಶಗಳಲ್ಲಿ ಇದು ಡಬ್ಬಲ್ ಮೀನಿಂಗ್ ಅಲ್ಲ. ಇಲ್ಲಿ ಏನೇನೋ ಅರ್ಥಗಳನ್ನು ಹೊರಡಿಸುತ್ತದೆ. ಮನುಷ್ಯ ತನ್ನ ಹತಾಶೆಗೆ ಕಂಡುಕೊಂಡ ಮಾರ್ಗ ಬೈಗುಳ. ನಾಲ್ಕಾರು ಮಂದಿಯ ಖಾಸಗಿ ವಲಯಗಳಲ್ಲಿ ಇಂತಹ ಮಾತುಗಳನ್ನಾಡುವುದೇನೋ ಸರಿ. ಆದರೆ, ಸಾರ್ವತ್ರಿಕವಾಗಿ ಆಡುವಾಗ ಏನೇನೋ ಅನರ್ಥಗಳಾಗುತ್ತವೆ. ಪಶ್ಚಿಮ ದೇಶಗಳಲ್ಲಿ 'ಫಕ್, ಶಿಟ್' ಎಂಬ ಪದಗಳು ಚೆನ್ನಾಗಿಯೇ ಕೇಳುತ್ತವೆ. ಇಲ್ಲಿ ಅವುಗಳ ವಿಸ್ತೃತ ರೂಪ ಗಲೀಜಾಗಿ ಕಾಣುತ್ತದೆ. ಹಾಗಂತ ಇದನ್ನು ಒಳಗೊಳಗೇ ಎಂಜಾಯ್ ಮಾಡುತ್ತಾ, ಆಮೇಲೆ ತೆಗಳಕೂಡದು. 'ನಿಷೇಧಿಸಿಬಿಡೋಣ ಎಂದರೆ ಗೊಡ್ಡು ಅಂದುಕೊಳ್ಳುತ್ತಾರೆ. ಹಾಗಾದರೆ, ಇವರು ಸರಿಯೋ, ಬಿಲೋ ದಿ ಬೆಲ್ಟ್ ಎನ್ನುವವರು ಸರಿಯೋ ಎಂದು ಯೋಚಿಸಿದರೆ ಸಿಕ್ಕುಗಳು ಹೆಚ್ಚಾಗುತ್ತವೆ.

'ವಜೈನಾ ಮೊನೊಲಾಗ್ ಎನ್ನುವ ಇಂಗ್ಲಿಷ್ ನಾಟಕದ ವಿಸ್ತೃತ ರೂಪಗಳಿವು. ಹೆಣ್ಣು ಬೈದರೆ ಮಹಿಳಾ ಸಬಲೀಕರಣ ಎನ್ನುವ ಇನ್ನೊಂದು ತಪ್ಪುಕಲ್ಪನೆ ಇದೆ. ಯಾವುದೇ ಸಂಸ್ಕೃತಿಯಲ್ಲಿ ಗೇಯತೆ, ಪರಂಪರೆ ಎನ್ನುವುದು ಇರುತ್ತದೆ. ಆದಕ್ಕೆ ಮನರಂಜನೆಯೂ ಹೊರತಲ್ಲ. ಹೀಗೆ ನಮ್ಮದಲ್ಲದ ಯಾವುದನ್ನೋ ನಮ್ಮದಾಗಿಸಿಕೊಳ್ಳುವ ಭರದಲ್ಲಿ ಜೋಕುಗಳು ಹಿರಿಯರ ಮನಸ್ಸಿನ ತಲ್ಲಣಗಳನ್ನು ಹೆಚ್ಚುಮಾಡುವುದು ಆತಂಕಕಾರಿ. ಒಂದು ನೇರ, ದಿಟ್ಟವಾದ ಸೆಕ್ಸಿಸ್ಟ್ ಜೋಕು ಅದನ್ನು ಹಾರಿಸುವವನ ಮನೆಯ ಹಿರಿಯರಲ್ಲಿ ಇನ್ನೂ ಏನೇನೋ ಇರಬಹುದಲ್ಲ ಎಂಬ ಚಿಂತೆ ಹೊತ್ತಿಕೊಳ್ಳುವಂತೆ ಮಾಡುತ್ತದೆ. ಮುಂದೆ ಇಂತಹ ಜೋಕುಗಳದ್ದೇ, ಬೈಗುಳಗಳದ್ದೇ ಕಾರ್ಯಕ್ರಮಗಳು ಪ್ರಸಾರವಾದರೂ ಅಚ್ಚರಿಯಿಲ್ಲ. ನಮ್ಮ ಗೇಯತೆಗೆ ಅವೆಲ್ಲ ಹೇಗೆ ಫಿಟ್ ಆಗುತ್ತವೆ ಎನ್ನುವ ಪ್ರಶ್ನೆಯಂತೂ ಇದೆ'.